# ವಿಶಿಷ್ಟಾದ್ವೈತದರ್ಶನ

ಪ್ರೊ. ಎಂ. ಎ. ಲಕ್ಷ್ಮೀತಾತಾಚಾರ್ಯ

**ಪರಮ ಕರುಣಾಳುಗಳೂ ಮತ್ತು ಭಕ್ತಿಪಂಥದ ಶ್ರೇಷ್ಠ ಆಚಾರ್ಯರೂ ಆದ ಶ್ರೀರಾಮಾನುಜಾಚಾರ್ಯರು ತಮ್ಮ ಜೀವಿತದ ಅಮೂಲ್ಯ ವರ್ಷಗಳನ್ನು ಕಳೆದದ್ದು ಕನ್ನಡ ನಾಡಿನಲ್ಲಿಯೇ. ಹೀಗಾಗಿ ಕರ್ನಾಟಕವು ಅವರ ವಿಶಿಷ್ಟಾದ್ವೈತ ತತ್ತ್ವದ ನೆಲೆವೀಡು ಕೂಡ. ಆಚಾರ್ಯರ ದರ್ಶನವನ್ನು 'ಸಮನ್ವಯ ಸಿದ್ಧಾಂತ' ಮತ್ತು 'ವೈಜ್ಞಾನಿಕ ತತ್ತ್ವ'ವಾಗಿ ವಿದ್ವತ್ಪೂರ್ಣವಾಗಿ ನಿರೂಪಿಸಿರುವ ಮಾನ್ಯ ಲೇಖಕರು ಪ್ರಸಿದ್ಧ ವಿದ್ವಾಂಸರು. ಲೇಖಕರು ಮತ್ತು ವಾಗ್ಮಿಗಳು ಹಾಗೂ ಮೈಸೂರಿನ ಸಂಸ್ಕೃತಿ ಪ್ರತಿಷ್ಠಾನದ ಅಧ್ಯಕ್ಷರು.**



## ಸರ್ವಜ್ಞತ್ವ

ಯಾರಿಗೆ ತಾನೇ ಸರ್ವಜ್ಞರಾಗಬೇಕೆಂಬ ಆಸೆಯಿರುವುದಿಲ್ಲ? ಮಂದಮತಿಗಳಾದವರನ್ನು ಅವರು ಜ್ಞಾನಿಗಳೆಂದು ಕೊಂಡಾಡಿದಾಗ, ಅವರಿಗೆ ಆಗುವ ಸಂತೋಷವೆಷ್ಟು! ತಿಳಿದೋ ತಿಳಿಯದೆಯೋ ಎಲ್ಲರಿಗೂ ಜ್ಞಾನಿಗಳಾಗಬೇಕೆಂಬ ತವಕ. ಹೀಗಿರುವಾಗ, ಸರ್ವಜ್ಞರೇ ಆದಾಗ ಆಗುವ ಆನಂದವೆಷ್ಟು! ಜ್ಞಾನಿಗಳಾಗಬೇಕೆಂದು ಬಯಸುವವರೆಲ್ಲರೂ ಸರ್ವಜ್ಞರಾಗಲಾರರು. ಆ ರೀತಿ, ಪರಿಪೂರ್ಣಜ್ಞಾನದಿಂದ ಸರ್ವಜ್ಞನಾಗಿರುವವನೆಂದರೆ, ಪರಮಾತ್ಮನು ಮಾತ್ರ. ಆದ್ದರಿಂದಲೇ ಉಪನಿಷತ್ತುಗಳು ಅವನನ್ನು **'ಯಃ ಸರ್ವಜ್ಞಃ ಸಃ ಸರ್ವವಿತ್'** ಎಂಬುದಾಗಿ ಕೊಂಡಾಡುತ್ತವೆ. ಇಲ್ಲಿ ಒಂದು ಸಂದೇಹ, **'ಸರ್ವಜ್ಞಃ'** ಎಂದರೂ ಎಲ್ಲವನ್ನೂ ತಿಳಿದವನೆಂದರ್ಥ. **'ಸರ್ವವಿತ್'** ಎಂದರೂ ಎಲ್ಲವನ್ನೂ ತಿಳಿದವನೆಂದರ್ಥ. ಈ ರೀತಿ, ಉಪನಿಷತ್ತಿನಲ್ಲಿ ಪರ್ಯಾಯ ಪದಗಳನ್ನು 'ಘಟಃ, ಕಲಶಃ' ಎಂಬಂತೆ ಒಂದೇ ಕಡೆ ಬಳಸಿರುವ ಔಚಿತ್ಯವೇನೆಂಬ ಪ್ರಶ್ನೆ ಏಳುತ್ತದೆ. ಇದಕ್ಕೆ ಶಾಸ್ತ್ರಕಾರರು, ಸರ್ವಜ್ಞ ಎಂದರೆ **'ಸರ್ವಂ ಸರ್ವತಯಾ ವೇತ್ತಿ** – ಎಲ್ಲವನ್ನೂ 'ಎಲ್ಲವೂ' ಎಂದು ತಿಳಿದಿದ್ದಾನೆ' ಎಂದೂ, ಸರ್ವವಿತ್ ಎಂದರೆ, **'ಸರ್ವಂ ಪ್ರತ್ಯೇಕತಯಾ ವೇತ್ತಿ'** ಅಂದರೆ, ಎಲ್ಲವನ್ನೂ ಪ್ರತ್ಯೇಕಿಸಿ ಒಂದೊಂದಾಗಿಯೂ ತಿಳಿದಿದ್ದಾನೆ' ಎಂದೂ ವಿವರಿಸಿ, ಪರಮಾತ್ಮನ ಸರ್ವಜ್ಞತ್ವವನ್ನು ಎರಡು ವಿಧವಾಗಿ ಬಣ್ಣಿಸಿದ್ದಾರೆ.

ಒಂದು ದೃಷ್ಟಿಯಲ್ಲಿ ನೋಡಿದಾಗ, **'ಸರ್ವಂ ಸರ್ವತಯಾ ವೇತ್ತಿ'** ಎಲ್ಲವನ್ನೂ 'ಎಲ್ಲವೂ' ಎಂದು ತಿಳಿಯಬಲ್ಲ ಸರ್ವಜ್ಞತ್ವ ನಮ್ಮೆಲ್ಲರಿಗೂ ಉಂಟು. ಆದರೆ, **'ಸರ್ವಂ ಪ್ರತ್ಯೇಕತಯಾ ವೇತ್ತಿ'** ಅಂದರೆ ಎಲ್ಲವನ್ನೂ ಪ್ರತ್ಯೇಕವಾಗಿ ತಿಳಿಯಬೇಕು ಎಂಬ ಸರ್ವಜ್ಞತ್ವ ಹುಲುಮಾನವರಾದ ನಮಗೆ ಸಾಧ್ಯವೇ ಇಲ್ಲ. ಆದರೆ, ಈ ಪ್ರಯತ್ನವನ್ನು ನಮ್ಮ ದಾರ್ಶನಿಕರು ಕೈಬಿಡಲಿಲ್ಲ. ಎರಡನೆಯ ಸರ್ವಜ್ಞತ್ವವನ್ನು ಪಡೆಯಲು ಅವರು ಮಧ್ಯಮಮಾರ್ಗವೊಂದನ್ನು ಅನುಸರಿಸಿದರು. ಪ್ರತ್ಯೇಕ ಪ್ರತ್ಯೇಕವಾದ ಎಲ್ಲಾ ಪದಾರ್ಥಗಳನ್ನೂ ಪದಾರ್ಥವಿಭಾಗ ಮಾಡಿ, ತಿಳಿಯುವುದರ ಮೂಲಕ ಸರ್ವವಿತ್ತುಗಳಾದರು.

ಶಂಕರಭಗವತ್ಪಾದರ ದೃಷ್ಟಿಯಲ್ಲಿ, ಸರ್ವವೂ ಬ್ರಹ್ಮಮಯ. ನಿತ್ಯ–ಶುದ್ಧ–ಬುದ್ಧ–ಮುಕ್ತ–ಚೈತನ್ಯವೊಂದೇ ಸತ್ಯ. ಮತ್ತೆಲ್ಲವೂ ಮಿಥ್ಯೆ. ಆದ್ದರಿಂದ, ಚೈತನ್ಯವನ್ನುಳಿದು ಮತ್ತೆ ಯಾವ ಪದಾರ್ಥವೂ ಇಲ್ಲ. ಆ ನಿತ್ಯ–ಶುದ್ಧ–ಬುದ್ಧ–ಮುಕ್ತ–ಚೈತನ್ಯದ ಸಾಕ್ಷಾತ್ಕಾರವೇ ಸರ್ವವಿದಿತ್ವಕ್ಕೆ ಹಾದಿ ಎಂದು ಅವರು ಸಾರಿದರು.

ಮಧ್ವಾಚಾರ್ಯರು ವಿಶ್ವದಲ್ಲಿರುವ ಪದಾರ್ಥಗಳನ್ನು ಎರಡಾಗಿ ವಿಭಾಗಿಸಿ, ಈ ತತ್ತ್ವಗಳನ್ನು ಸ್ಪಷ್ಟವಾಗಿ ಅರಿಯುವುದರ ಮೂಲಕ ಜಗತ್ತನ್ನೇ ಅರಿತು, ಸರ್ವಜ್ಞತ್ವವನ್ನು ಸಂಪಾದಿಸಬಹುದೆಂದು ತೋರಿಸಿಕೊಟ್ಟರು. ಅವರ ಪ್ರಕಾರ, ಈ ಪ್ರಪಂಚದಲ್ಲಿರುವ ತತ್ವಗಳು ಎರಡೇ. ಒಂದು, ಸ್ವತಂತ್ರ – ಅದೇ ಪರಮಾತ್ಮ ತತ್ವ. ಮತ್ತೊಂದು, ಅಸ್ವತಂತ್ರ ತತ್ವ, ಅಂದರೆ, ಅಚೇತನ ಪದಾರ್ಥಗಳು ಮತ್ತು ಚೇತನಪದಾರ್ಥಗಳು.

ಇವೆಲ್ಲವೂ ಭಗವಂತನಿಗೆ ಅಡಿಯಾಳಾದವುಗಳೇ; ಆದ್ದರಿಂದ ಅಸ್ವತಂತ್ರ ತತ್ವಗಳು.

ಛಾಂದೋಗ್ಯೋಪನಿಷತ್ತು, **'ಏಕವಿಜ್ಞಾನೇನ ಸರ್ವವಿಜ್ಞಾನ'** ಅಂದರೆ, ಒಂದನ್ನು ತಿಳಿದುಕೊಳ್ಳುವುದರಿಂದ ಎಲ್ಲವನ್ನೂ ತಿಳಿದುಕೊಳ್ಳಲು ಸಾಧ್ಯ ಎನ್ನುತ್ತದೆ. ನಮ್ಮ ಮತತ್ರಯಾಚಾರ್ಯರೂ ಈ ದಿಸೆಯಲ್ಲೇ ಕಾರ್ಯೋನ್ಮುಖರಾಗಿ, ತಾವು ಕಂಡುಕೊಂಡ ನಿತ್ಯಸತ್ಯವೇ 'ಸರ್ವವಿಜ್ಞಾನ', ಅಂದರೆ ಎಲ್ಲಾ ವಸ್ತುಗಳ ನಿಜವಾದ ವಿಶೇಷ ಜ್ಞಾನವಾಗುವುದು ಎಂದು ತಿಳಿಸಿದರು.

ಪ್ರಾಚೀನ ದಾರ್ಶನಿಕರ ದೃಷ್ಟಿಯನ್ನೇ ಆಧಾರವಾಗಿಟ್ಟುಕೊಂಡು, ರಾಮಾನುಜರು ಪ್ರತಿಪಾದಿಸಿದ ದರ್ಶನಕ್ಕೇ 'ವಿಶಿಷ್ಟಾದ್ವೈತದರ್ಶನ' ಎಂದು ಹೆಸರು. ಶಂಕರ ಮತ್ತು ಮಧ್ವರ ದರ್ಶನಗಳೆರಡರ ಸಮನ್ವಯವೋ ಎಂಬಂತೆ ತೋರುವ ದರ್ಶನವಿದು. ಏಕೆಂದರೆ, ಶ್ರೀರಾಮಾನುಜರು ಈ ವಿಶ್ವವೆಲ್ಲವೂ ಒಂದೇ ತತ್ವವೆಂದು ಪ್ರತಿಪಾದಿಸಿದ್ದಾರೆ. ಚೇತನಾಚೇತನಗಳ ಸಮೂಹವೇ ಈ ಜಗತ್ತು. ಅದರಲ್ಲಿ ಪರಮಾತ್ಮನೆಂಬ ಸ್ವತಂತ್ರ ಚೇತನಕ್ಕೆ ಜೀವಾತ್ಮರೆಂಬ ಚೇತನಗಳೂ, ಅಚೇತನ ಪದಾರ್ಥಗಳೂ ಅಡಿಯಾಳಾಗಿವೆ. ಈ ಮೂರರ ಸ್ವರೂಪ–ಸ್ವಭಾವಗಳನ್ನು ಯಥಾವತ್ತಾಗಿ ಅರಿತಾಗ, ನಾವು ನಿಜವಾಗಿಯೂ ಸರ್ವಜ್ಞರಾಗುತ್ತೇವೆ. ಶಂಕರರ ಸಿದ್ಧಾಂತಕ್ಕೆ ಅನುಗುಣವಾದ ತತ್ತ್ವಾದ್ವೈತವನ್ನೇನೂ ರಾಮಾನುಜರು ಬಿಡಲಿಲ್ಲ. ಏಕೆಂದರೆ, ಚೇತನ, ಅಚೇತನ, ಪರಮಾತ್ಮ – ಈ ಮೂರೂ ತತ್ವಗಳೂ ಒಂದನ್ನೊಂದು ಬಿಡದಂತೆ ಹೆಣೆದುಕೊಂಡಿವೆ. **ಆದರೆ, ರಾಮಾನುಜರ ಪ್ರಕಾರ ಈ ಬಗೆಯ ಅದ್ವೈತವು ವಿಶೇಷಗಳಿಂದ ಕೂಡಿದ ಅದ್ವೈತ ತತ್ವ . ಅದನ್ನೇ ವಿಶಿಷ್ಟಾದ್ವೈತವೆಂದು ಕರೆದು ಅವರು ಪ್ರತಿಪಾದಿಸಿದರು.**

ಅದೇ ರೀತಿಯಲ್ಲಿ, ಪರಮಾತ್ಮತತ್ವವನ್ನೂ, ಅಸ್ವತಂತ್ರತತ್ವಗಳಾದ ಚೇತನಾಚೇತನಗಳನ್ನೂ ಪ್ರತ್ಯೇಕವಾಗಿ ತಿಳಿದಾಗ, ತತ್ವಗಳ ವಿಭಿನ್ನತೆ ಎದ್ದು ಕಾಣುತ್ತದೆ. ಆ ದೃಷ್ಟಿಯಿಂದ, ರಾಮಾನುಜರು ಭೇದವನ್ನೂ, ಅಭೇದವನ್ನೂ, ಭೇದಾಭೇದವನ್ನೂ ಉಪನಿಷತ್ತುಗಳು ಪ್ರತಿಪಾದಿಸಿರುವುದಾಗಿ ತಮ್ಮ **'ವೇದಾರ್ಥಸಂಗ್ರಹ'** ಗ್ರಂಥದಲ್ಲಿ ಪ್ರತಿಪಾದಿಸಿದ್ದಾರೆ. ತತ್ವಗಳ ವಿಮರ್ಶೆ ಮಾಡುವಾಗ, ಅವರು ಹೇಳುವ ಮಾತುಗಳು ಇವು – **'ಕಿಮತ್ರ ತತ್ವಂ? ಭೇದೋ ವಾ? ಅಭೇದೋ ವಾ? ದ್ವ್ಯಾತ್ಮಕತಾ ವಾ? ಸರ್ವಸ್ಯ ವೇದವೇದ್ಯತ್ವಾತ್ ಸರ್ವಂ ಸಮರ್ಥಿತಂ ಭವತಿ'**. ಇದರ ಅರ್ಥ ಹೀಗಿದೆ: "ಇದರಲ್ಲಿ ಯಾವುದು ತಾನೇ 'ತತ್ತ್ವ' ಎಂದು ಕರೆಸಿಕೊಳ್ಳುವುದಕ್ಕೆ ಯೋಗ್ಯವಾಗಿದೆ? ಭೇದವೇ? ಅಭೇದವೇ? ಇವೆರಡೂ ಇದೆಯೇ? ಈ ಮೂರೂ ವೇದಗಳಿಂದ ತಿಳಿದುಬರುವುದರಿಂದ ಅವುಗಳೆಲ್ಲದಕ್ಕೂ ಸಮರ್ಥನೆಯು ಸಿಕ್ಕುತ್ತದೆ."

ಈ ರೀತಿ, ಎಲ್ಲ ದರ್ಶನಗಳ ಸಾಮಂಜಸ್ಯವನ್ನು ಪ್ರತಿಪಾದಿಸಿದ, ಶ್ರೀರಾಮಾನುಜರನ್ನು 'ಸಮನ್ವಯಾಚಾರ್ಯ'ರು ಎಂದು ಕರೆದರೂ ತಪ್ಪಿಲ್ಲ. ಆದ್ದರಿಂದ, ತಮ್ಮ ಮೇರುಕೃತಿ ಶ್ರೀಭಾಷ್ಯದ ಕೊನೆಯ ವಾಕ್ಯವನ್ನು ಇವರು, **'ಇತಿ ಸರ್ವಂ ಸಮಂಜಸಮ್'** – ಇಲ್ಲಿ ಎಲ್ಲವೂ ಸಮಂಜಸವಾಗಿದೆ ಎಂದು ಮುಗಿಸಿದ್ದಾರೆ. ಏಕತೆಯಲ್ಲಿ ಅನೇಕತೆಯನ್ನೂ, ಅನೇಕತೆಯಲ್ಲಿ ಏಕತೆಯನ್ನೂ ಪ್ರತಿಪಾದಿಸುವ ಈ ವಿಶಿಷ್ಟಾದ್ವೈತದರ್ಶನ, ನಮ್ಮ ಪ್ರಾಪಂಚಿಕ ಸಮಸ್ಯೆಗಳಿಗೆ ಪರಿಹಾರವಾಗಿದೆ; ನಮ್ಮ ಅಧ್ಯಾತ್ಮ ಪ್ರವೃತ್ತಿಗೂ ದಾರಿದೀಪವಾಗಿದೆ.

> **ಅಖಿಲಭುವನಜನ್ಮ ಸ್ಥೇಮಭಂಗಾದಿಲೀಲೇ**
> **ವಿನತವಿವಿಧಭೂತ ವ್ರಾತರಕ್ಷೈಕದೀಕ್ಷೇ ।**
> **ಶ್ರುತಿಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ**
> **ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ ॥**
>
> ಅಖಿಲ ಜಗತ್ತಿನ ಸೃಷ್ಟಿ–ಸ್ಥಿತಿ–ಲಯವೇ ಮೊದಲಾದುವು ಯಾವನಿಗೆ ಲೀಲೆಯಾಗಿದೆಯೋ, ಶರಣಾಗತರಾದ ವಿವಿಧ ಪ್ರಾಣಿಸಮೂಹಗಳ ರಕ್ಷಣೆಯೊಂದೇ ಯಾವನಿಗೆ ದೀಕ್ಷೆಯಾಗಿದೆಯೋ, ಶ್ರುತಿಗಳಿಗೆ ಶಿರಸ್ಸೆನಿಸಿದ ಉಪನಿಷತ್ತುಗಳಲ್ಲಿ ಯಾವನು ವಿಶೇಷವಾಗಿ ಪ್ರತಿಪಾದಿತನಾಗಿದ್ದಾನೋ, ಆ ಪರಬ್ರಹ್ಮನಾದ ಶ್ರೀನಿವಾಸನಲ್ಲಿ ನನಗೆ ಭಕ್ತಿರೂಪವಾದ ಜ್ಞಾನವುಂಟಾಗಲಿ. – *ಶ್ರೀರಾಮಾನುಜಾಚಾರ್ಯರು*

ಪ್ರಾಯೋಗಿಕವಾಗಿ ಈ ದರ್ಶನವನ್ನು ಸ್ವಲ್ಪ ತಿಳಿಯಲು ಪ್ರಯತ್ನಿಸೋಣ. ಒಂದು ಮಾವಿನ ಹಣ್ಣನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ, ಅದರಲ್ಲಿರುವ ಅನೇಕ ಪದಾರ್ಥಗಳ ಅರಿವಾಗದಿರದು. ಅದರಲ್ಲಿರುವ ತಿರುಳು, ಓಟೆ, ಸಿಪ್ಪೆ, ರಸ, ಇವುಗಳಲ್ಲದೆ ವಾಸನೆ, ರುಚಿ, ಬಣ್ಣ ಇತ್ಯಾದಿ ಅನೇಕ ಪದಾರ್ಥಗಳು ನಮಗೆ ಕಾಣಸಿಗುತ್ತವೆ. ಆದರೆ, ಇದೆಲ್ಲದರ ಸಮ್ಮೇಳನವನ್ನು ನಾವು ಮಾವಿನಹಣ್ಣು ಎಂಬ ಒಂದೇ ಪದಾರ್ಥವನ್ನಾಗಿಯೇ ಭಾವಿಸುತ್ತೇವೆಯೇ ಹೊರತು, ಅನೇಕ ಪದಾರ್ಥಗಳೆಂದು ಭಾವಿಸುವುದಿಲ್ಲ. ಹಾಗಿದ್ದರೆ, 'ಮಾವಿನಹಣ್ಣುಗಳು' ಎಂಬ ಬಹುವಚನದ ಪ್ರಯೋಗವಾಗಿರಬೇಕಿತ್ತು. ಈ ರೀತಿಯಲ್ಲಿ ನಾವು ನೋಡುವ ಪ್ರತಿಯೊಂದು ಪದಾರ್ಥವೂ ಅನೇಕ ವಿಶೇಷಗಳಿಂದ ಕೂಡಿದ್ದರೂ, ಒಂದಾಗಿಯೇ ತೋರುತ್ತದೆ. **ಇದೇ ಅನೇಕತೆಯಲ್ಲಿ ಏಕತೆ ಮತ್ತು ಏಕತೆಯಲ್ಲಿ ಅನೇಕತೆ.** ಇದರ ಮರ್ಮವನ್ನು ಅರಿತವನು ಮಾತ್ರ ನಿಜವಾದ ದಾರ್ಶನಿಕ ಎನ್ನಿಸಿಕೊಳ್ಳುತ್ತಾನೆ.

ಇದರಂತೆಯೇ, ಈ ವಿಶ್ವವೆಲ್ಲವೂ ಪರಮಾತ್ಮನ, ಚೇತನ–ಅಚೇತನಗಳ ಸಮ್ಮಿಳನದಿಂದಲೇ ಉಂಟಾಗಿರುವುದು. ಇವುಗಳ ಒಟ್ಟಾಗಿರುವಿಕೆಯನ್ನು ಯಾರಿಂದಲೂ ಬೇರ್ಪಡಿಸಲು ಸಾಧ್ಯವಿಲ್ಲ. ಒಟ್ಟಾಗಿ ತಿಳಿದಾಗ ಇದೊಂದೇ ತತ್ವ. ಅದೇ ಸವಿಶೇಷಾದ್ವೈತತತ್ವ. ಬೌದ್ಧಿಕವಾಗಿ ಇದರಲ್ಲಿ ಮಿಳಿತವಾಗಿರುವ

ತತ್ವಗಳನ್ನು ವಿವೇಚಿಸಿದಾಗ, ಇದು ತತ್ವತ್ರಯ. ಈ ತತ್ವತ್ರಯದಲ್ಲಿ ಜೀವಾತ್ಮತತ್ವವನ್ನೂ, ಅಚೇತನತತ್ವಗಳನ್ನೂ ಮಧ್ವಾಚಾರ್ಯರು ಅಸ್ವತಂತ್ರತತ್ವವೆಂದು ಕರೆದರು. ಪರಮಾತ್ಮತತ್ವವನ್ನು ಸ್ವತಂತ್ರತತ್ವ ಎಂದು ಕರೆದರು; ಒಟ್ಟು ಎರಡು ತತ್ವಗಳಿರುವುದರಿಂದ ಉಪನಿಷತ್ತುಗಳಲ್ಲಿ ದ್ವೈತವೇ ಪ್ರತಿಪಾದಿತವಾಗುತ್ತದೆ ಎಂದರು.

**ರಾಮಾನುಜರು ದ್ವೈತಾದ್ವೈತಗಳ ಸಮನ್ವಯಕ್ಕೆ ಆರಿಸಿಕೊಂಡ ದಾರಿ, ಉಪನಿಷತ್ತುಗಳಲ್ಲಿ ಪ್ರತಿಪಾದಿತವಾದ ಮಾರ್ಗವೇ ಆಗಿದೆ. 'ಯಸ್ಯ ಪೃಥಿವೀ ಶರೀರಂ, ಯಸ್ಯ ಆತ್ಮಾ ಶರೀರಂ' – ಯಾವನಿಗೆ ಪೃಥಿವಿಯೇ ಶರೀರವಾಗಿದೆಯೋ, ಯಾವನಿಗೆ ಆತ್ಮವೇ ಶರೀರವಾಗಿದೆಯೋ ಮುಂತಾದ ಉಪನಿಷತ್ತಿನ ವಾಕ್ಯಗಳು, ದ್ವೈತಾದ್ವೈತಸಮನ್ವಯಕ್ಕೆ ದಾರಿದೀಪವಾಗುತ್ತವೆ. ಈ ವಾಕ್ಯಗಳಲ್ಲಿ, 'ಶರೀರ' ಎಂಬ ಶಬ್ದ ವಿಶ್ವದ ಬಗೆಗಿನ ನಮ್ಮ ಜ್ಞಾನಕ್ಕೆ ಹೊಸ ಮಾರ್ಗವನ್ನು ತೆರೆಯುತ್ತದೆ.**

ಶರೀರ ಎಂದ ಒಡನೆ, ನಮಗೆ ನೆನಪಾಗುವುದು ನಮ್ಮ ಭೌತಿಕ ದೇಹ. ಇದನ್ನು ಸ್ವಲ್ಪ ವಿಶ್ಲೇಷಿಸಿ ನೋಡೋಣ. ಮೂಳೆ, ಮಾಂಸ ಮೊದಲಾದ ಏಳು ಪದಾರ್ಥಗಳಿಂದಾಗಿರುವುದು, ಈ ಶರೀರ. ಈ ಶರೀರದಲ್ಲಿ ಚೈತನ್ಯದ ಸಂಚಾರವಿರುವ ತನಕ ಅದನ್ನು ಜೀವಂತವಾಗಿದೆ ಎನ್ನುತ್ತೇವೆ. ಅದರ ವಿಯೋಗವಾದ ನಂತರ ಇದನ್ನು 'ಶವ' ಎನ್ನುತ್ತೇವೆ. ಹೀಗೆ ಚೈತನ್ಯವೇ ಶರೀರಕ್ಕೆ ಜೀವದಾಯಿನಿಯಾದ ಅಂತರ್ಯಾಮಿ ತತ್ತ್ವವಾಗಿದೆ. ಅದರಂತೆಯೇ, ವೇದ ಮೊದಲಾದ ಪ್ರಮಾಣಗಳಿಂದ ನಮಗೆ ತಿಳಿಯುವ ವಿಷಯವೇನೆಂದರೆ, ಈ ಪರಮಾತ್ಮನೇ ಜಗತ್ತಿನಲ್ಲೆಲ್ಲ ಅಂತರ್ಯಾಮಿಯಾಗಿ ವ್ಯಾಪಿಸಿದ್ದಾನೆ ಎಂಬುದು.

ಅದನ್ನೇ ಈಶಾವಾಸ್ಯ ಉಪನಿಷತ್ತು ಕೂಡ **'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್'** – "ಈ ಜಗತ್ತೆಲ್ಲವನ್ನೂ ಪರಮಾತ್ಮದಿಂದ ತುಂಬಿಬಿಡಬೇಕು" ಎಂದು ಸಾರಿ ಹೇಳುತ್ತದೆ. ಈ ಮರ್ಮವನ್ನರಿತ ರಾಮಾನುಜರು, ಚೇತನಾಚೇತನಾತ್ಮಕವಾದ ಈ ಪ್ರಪಂಚವೇ ಸರ್ವೇಶ್ವರನಾದ ಪರಮಾತ್ಮನ ಶರೀರ, ಅವನೇ ಈ ಶರೀರದ ನಿಯಾಮಕ, ಧಾರಕ ಮತ್ತು ಸ್ವಾಮಿ ಎಂದು ಪ್ರತಿಪಾದಿಸಿದರು.

ಪರಮಾತ್ಮನು ಈ ಶರೀರದಲ್ಲೇ ವಾಸಿಸುತ್ತಿದ್ದರೂ, ಅವನಿಗೆ ಈ ಶರೀರದ ಸುಖದುಃಖಗಳು ತಟ್ಟದು. ಏಕೆಂದರೆ, ಅವನು ಈ ಶರೀರದಲ್ಲಿ ವಾಸಿಸುತ್ತಿರುವುದು, ಕರ್ಮಸಂಬಂಧದಿಂದಲ್ಲ, ತನ್ನ ಸಂಕಲ್ಪದಿಂದ ಮಾತ್ರ. ನಾವಾದರೋ ಈ ಶರೀರದಲ್ಲಿ ವಾಸಿಸುತ್ತಿರುವುದು, ಕರ್ಮಸಂಬಂಧದಿಂದ. ಆದ್ದರಿಂದ, ಆ ಕರ್ಮಗಳಿಗೆ ಅನುಗುಣವಾದ ಸುಖದುಃಖಗಳಿಂದ ದೂರವಿರಲು ಜೀವಿಗಳಾದ ನಮಗೆ ಸಾಧ್ಯವಿಲ್ಲ.

ನಿಜವಾಗಿ ನೋಡಿದಾಗ, ಬ್ರಹ್ಮಾಂಡ–ಪಿಂಡಾಂಡಗಳ ಮಧ್ಯೆ ಯಾವ ವಿಧವಾದ ವ್ಯತ್ಯಾಸವೂ ಇಲ್ಲ. ಗೋಪಾಲನೆಂಬ ವ್ಯಕ್ತಿಯೊಬ್ಬನನ್ನು ವಿಶ್ಲೇಷಿಸಿದಾಗ, ಅವನ ಶರೀರ, ಅವನ ಆತ್ಮ, ಅವನಲ್ಲಿರುವ ಪರಮಾತ್ಮ – ಈ ಮೂರರ ಅರಿವೂ ನಮಗಾಗುತ್ತದೆ. ಆದರೆ, ಗೋಪಾಲನ ಶರೀರದಲ್ಲೇ ಅಸಂಖ್ಯವಾದ ಜೀವಕಣಗಳಿವೆ. ಈ ಜೀವಕಣಗಳೊಂದೊಂದಕ್ಕೂ ಆಧಾರವಾಗಿರುವ ಒಂದು ದ್ರವ್ಯವನ್ನೇ ನಾವು 'ಶರೀರ' ಎಂದು ಕರೆಯಬಹುದು. ಅದರಲ್ಲಿರುವ 'ಜೀವಾತ್ಮ', ಅದರಲ್ಲಿ ಅಂತರ್ಯಾಮಿಯಾಗಿರುವ 'ಪರಮಾತ್ಮ' ಎಂದು ಬೇರೆಬೇರೆಯಾಗಿ ವಿಶ್ಲೇಷಿಸಬಹುದು. ಈ ರೀತಿ ನೋಡಿದಾಗ, ಒಬ್ಬ ಸಾಮಾನ್ಯ ವ್ಯಕ್ತಿಯೇ ಒಂದು 'ಸಂಕ್ಷಿಪ್ತ ವಿಶ್ವ' ವಾಗಿ ತೋರುತ್ತಾನೆ.

ಆದರೆ, ಒಂದು ವಿಸ್ಮಯಕಾರಿ ಸಂಗತಿಯೆಂದರೆ, ಗೋಪಾಲನಲ್ಲಿ ಇರುವ ಪ್ರತಿಯೊಂದು ಜೀವಕಣವೂ ಗೋಪಾಲನೆಂಬ ವಿಶಿಷ್ಟವ್ಯಕ್ತಿಯ ವ್ಯವಸ್ಥೆಗೆ (System) ಅನುಗುಣವಾಗಿ ಕೆಲಸ ಮಾಡುವ ಉಪವ್ಯವಸ್ಥೆಯೇ (Sub-system) ಆಗಿದೆ. ಇವುಗಳಲ್ಲಿ ಏರುಪೇರಾದಾಗ ಮೂಲವ್ಯವಸ್ಥೆಯಲ್ಲೂ ಏರುಪೇರಾಗಬಹುದು. ಆದ್ದರಿಂದ, ಪ್ರತಿಯೊಂದು ಉಪವ್ಯವಸ್ಥೆಯೂ ತನ್ನ ತನ್ನ ಕರ್ತವ್ಯವನ್ನು ನಿರ್ವಹಿಸಿದಾಗ ಮಾತ್ರ ಮೂಲವ್ಯವಸ್ಥೆ(Main System) ಸರಿಯಾಗಿ ಕೆಲಸ ಮಾಡಬಲ್ಲುದು. ಇದೇ ಶ್ರೀರಾಮಾನುಜರು ಅರಿತು ಬೋಧಿಸಿದ ಉಪನಿಷದ್ರಹಸ್ಯ.

ಪರಮಾತ್ಮಾಧಿಷ್ಠಿತವಾದ ಚೇತನಾಚೇತನದ ಸಮ್ಮಿಳನವಾದ ಬ್ರಹ್ಮಾಂಡವನ್ನು ಮೂಲವ್ಯವಸ್ಥೆಯೆಂದು (Main System) ಭಾವಿಸಿದರೆ, ಅದರಲ್ಲಿರುವ ಅಸಂಖ್ಯಾತ ಪಿಂಡಾಂಡಗಳೇ ಉಪವ್ಯವಸ್ಥೆಗಳಾಗುತ್ತವೆ. ಈ ಉಪವ್ಯವಸ್ಥೆಗಳು (Sub-system) ಸರಿಯಾಗಿ ತಮ್ಮ ತಮ್ಮ ಕರ್ತವ್ಯವನ್ನು ನಿರ್ವಹಿಸಿದಾಗ ಮಾತ್ರ ನಮ್ಮ ವಿಶ್ವ ಅಥವಾ ಬ್ರಹ್ಮಾಂಡ ಸುಸ್ಥಿತಿಯಲ್ಲಿರಬಹುದು. ಪಿಂಡಾಂಡಗಳು ಅಥವಾ ಉಪವ್ಯವಸ್ಥೆಗಳು ತಮ್ಮ ಕರ್ತವ್ಯವನ್ನು ನಿರ್ವಹಿಸದೆ, ಚೆಲ್ಲಾಪಿಲ್ಲಿಯಾದಾಗ ಮೂಲವ್ಯವಸ್ಥೆಗೆ ಧಕ್ಕೆ ಏರ್ಪಡುತ್ತದೆ. ಉಪವ್ಯವಸ್ಥೆಗಳ ಚೆಲ್ಲಾಟವು ಸಹನಾತ್ಮಕ ಮಟ್ಟವನ್ನು (Tolerance level) ಮೀರಿದಾಗ, ವಿಶ್ವದ ವ್ಯವಸ್ಥೆಯೇ ಏರುಪೇರಾಗಿ, ಅದು ನಾಶವಾಗುವ ಪರಿಸ್ಥಿತಿಯನ್ನು ತಲುಪಬಹುದು. ಇದೇ ಪ್ರಳಯ.

ಈ ರೀತಿ, ತತ್ವಸಾಕ್ಷಾತ್ಕಾರವನ್ನು ಮಾಡಿಕೊಂಡ ರಾಮಾನುಜರು, ವಿಶ್ವವನ್ನು ಕುರಿತಂತೆ ಹೊಸ ವ್ಯಾಖ್ಯೆಯನ್ನೇ ನಮಗೆ ನೀಡಿದ್ದಾರೆ. ಅವರ ಈ ವ್ಯಾಖ್ಯೆ, ಈಗಿನ ವಿಜ್ಞಾನದ ಸಮಗ್ರ ದೃಷ್ಟಿಗೂ (Holistic approach) ಇಂಬು ನೀಡುತ್ತದೆ.

ಚೇತನಾಚೇತನಾತ್ಮಕವಾದ ಈ ಪ್ರಪಂಚ, ಪರಮಾತ್ಮನ ಶರೀರವಾಗಿದೆ ಎಂಬ ಉಪನಿಷದ್ರಹಸ್ಯವು ದ್ವೈತಾದ್ವೈತದರ್ಶನಗಳ ಸಮನ್ವಯವನ್ನು ಸಾಧಿಸಬಲ್ಲುದು. ಇದೇ ಶ್ರೀರಾಮಾನುಜರ **ಸವಿಶೇಷಾದ್ವೈತದರ್ಶನ** ಅಥವಾ **ವಿಶಿಷ್ಟಾದ್ವೈತದರ್ಶನ**.